# ಸೂಪರ್ ಫ್ಯಾನ್ ಕಟ್ಟಿದ ವರ್ಚ್ಯುವಲ್ ಸ್ಟೇಡಿಯಂ

ಇಲ್ಲೊಬ್ಬರಿದ್ದಾರೆ, ಇವರು ಒಲಿಂಪಿಕ್ ಕೂಟದ ಸೂಪರ್ ಫ್ಯಾನ್. ಈ ಕ್ರೀಡಾಪ್ರೇಮಿಗೆ ಸೂಪರ್ ಫ್ಯಾನ್ ಎಂಬ ಉಪಮೇಯ. ಏಕೆಂದರೆ, ಕಳೆದ ಮೂವತ್ತು ವರ್ಷಗಳಿಂದ ಅವರು ಒಂದೇ ಒಂದು ಒಲಿಂಪಿಕ್ ಕೂಟದ ಉದ್ಘಾಟನಾ ಸಮಾರಂಭವನ್ನೂ ತಪ್ಪಿಸಿಕೊಂಡಿಲ್ಲ. ಪ್ರತಿಯೊಂದು ಕೂಟ ನಡೆದ ಸ್ಥಳಕ್ಕೆ ತೆರಳಿ ಕ್ರೀಡಾಂಗಣದಲ್ಲೇ ಆಟದ ಸೊಬಗನ್ನು ಕಣ್ತುಂಬಿಕೊಂಡವರು ಅವರು. ಅವರೇ ಜಪಾನಿನ ಕಯೊಕೊ ಇಷಿಕಾವಾ. ತಮ್ಮೂರು ಟೋಕಿಯೊದಲ್ಲೇ ಈ ಸಲದ ಕೂಟ ನಡೆಯುತ್ತಿದ್ದರೂ ಅವರಿಗೆ ಖುದ್ದು ಕ್ರೀಡಾಂಗಣದಲ್ಲಿ ಹಾಜರಿದ್ದು ಅಥ್ಲೀಟ್‌ಗಳನ್ನು ಹುರಿದುಂಬಿಸಲು ಆಗುತ್ತಿಲ್ಲ. ಕಾರಣ, ಕೊರೊನಾ ಕಾರಣ ಪ್ರೇಕ್ಷಕರಿಗೆ ನಿರ್ಬಂಧ ವಿಧಿಸಿರುವುದು.

ಪ್ರೇಕ್ಷಕರಿಗೆ ಕ್ರೀಡಾಂಗಣದಲ್ಲಿ ನಿರ್ಬಂಧ ವಿಧಿಸಿರುವುದು ಇಷಿಕಾವಾ ಅವರ ಉತ್ಸಾಹಕ್ಕೆ ಅಡ್ಡಬಂದಿಲ್ಲ. ತಮ್ಮ ಮನೆಯನ್ನೇ 'ವರ್ಚ್ಯುವಲ್ ಸ್ಟೇಡಿಯಂ' ಆಗಿ ಪರಿವರ್ತಿಸಿರುವ ಅವರು, ಅಥ್ಲೀಟ್‌ಗಳು ಸಾಧನೆ ಮೆರೆದಾಗಲೆಲ್ಲ ರಾಷ್ಟ್ರಧ್ವಜವನ್ನು ಬೀಸುತ್ತಾ, ಸಿಳ್ಳೆ ಹಾಕುತ್ತಾ ಸಂಭ್ರಮಿಸುತ್ತಿದ್ದಾರೆ. ಉದ್ಯಮಿಯಾಗಿರುವ 51 ವರ್ಷದ ಇಷಿಕಾವಾ, 1992ರಿಂದ ಇದುವರೆಗೆ ಒಂದು ಕೂಟವನ್ನೂ ತಪ್ಪಿಸಿಲ್ಲ. ಆದರೆ, ತವರಿನ ಕೂಟದಲ್ಲಿಯೇ ಖುದ್ದು ಹಾಜರಿರಲು ಅವರಿಗೆ ಸಾಧ್ಯವಾಗುತ್ತಿಲ್ಲ. ಪ್ರತಿದಿನ ಸಾಂಪ್ರದಾಯಿಕ ಜಪಾನಿ ಉಡುಗೆಯನ್ನು ತೊಟ್ಟು, ಟಿ.ವಿ. ಮುಂದೆ ಪ್ರತಿಷ್ಠಾಪನೆಗೊಳ್ಳುವ ಅವರು, ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿಯಲ್ಲಿ ಮಾಡುತ್ತಿದ್ದಂತೆಯೇ ಸಂಭ್ರಮಾಚರಣೆಯನ್ನೂ ಮಾಡುತ್ತಾರೆ.

'ವರ್ಚ್ಯುವಲ್ ಸ್ಟೇಡಿಯಂ'ನಲ್ಲಿ ಖುದ್ದು ಕ್ರೀಡಾಂಗಣದಲ್ಲಿಯೇ ಇದ್ದಂತೆ ಭ್ರಮಿಸಲು ಎಲ್ಲ ದೇಶಗಳ ಧ್ವಜಗಳನ್ನು ಮನೆತುಂಬಾ ಕಟ್ಟಿದ್ದಾರೆ. ತಾವು ಈ ಹಿಂದೆ ಹೋಗಿದ್ದ ಕೂಟಗಳಿಂದ ತಂದ ಸ್ಮರಣಿಕೆಗಳನ್ನು ಜೋಡಿಸಿದ್ದಾರೆ. ಲೈವ್ ಕಾನ್ಫರೆನ್ಸ್ ಕಾಲ್‌ಗಳ ಮೂಲಕ, ಸಾಮಾಜಿಕ ಜಾಲತಾಣಗಳ ಮೂಲಕ ಅಭಿಮಾನಿಗಳೊಂದಿಗೆ ನಿರಂತರ ಸಂಪರ್ಕದಲ್ಲಿರುವ ಇಷಿಕಾವಾ, 'ಸಾಂಕ್ರಾಮಿಕದ ಈ ಕಾಲಘಟ್ಟದಲ್ಲೂ ಕ್ರೀಡೆ ಎಲ್ಲರನ್ನೂ ಹತ್ತಿರಕ್ಕೆ ತರುತ್ತಿದೆ' ಎಂದು ಖುಷಿಯಿಂದ ಹೇಳುತ್ತಾರೆ.




'ನಾವು ಯಾವುದೇ ರೀತಿಯಲ್ಲಿ ಒಟ್ಟಿಗೆ ಸೇರಿರಬಹುದು. ಆದರೆ ಕ್ರೀಡೆಯ ಮೇಲಿನ ಪ್ರೀತಿಗೆ, ಸಾಧನೆಯಿಂದ ಆಗುವ ಖುಷಿಗೆ ಎಣೆಯಿಲ್ಲ' ಎಂದೆನ್ನುವ ಅವರು, ಕೂಟ ಮುಗಿಯುವವರೆಗೆ ನನ್ನ 'ವರ್ಚ್ಯುವಲ್ ಸ್ಟೇಡಿಯಂ' ಬಿಟ್ಟು ಕದಲುವುದಿಲ್ಲ' ಎಂದು ನಗುತ್ತಾರೆ. ಇಷಿಕಾವಾ ಅವರು ಮದುವೆಯಾಗಿರುವುದು ಅಮೆರಿಕದ ಉದ್ಯಮಿ ಜಾನ್ ಅವರನ್ನು. ಶಾಂಪೇನ್ ಸಿಡಿಸುತ್ತಾ ಅವರೂ ಪತ್ನಿಯ ಸಂಭ್ರಮದಲ್ಲಿ ಭಾಗಿಯಾಗಿದ್ದಾರೆ. ಎಲ್ಲ ನಕಾರಾತ್ಮಕ ಅಂಶಗಳಿಗೆ ಗುಡ್‌ಬೈ ಹೇಳುವ ಸಮಯ ಇದು ಎಂದು ಈ ದಂಪತಿ ಒಕ್ಕೊರಲಿನಿಂದ ಹೇಳುತ್ತಾರೆ.

ಕೂಟದ ಉದ್ಘಾಟನಾ ಸಮಾರಂಭದ ಕಾಲಕ್ಕೆ ಟೋಕಿಯೊದ ಸಾವಿರಾರು ಕ್ರೀಡಾ ಅಭಿಮಾನಿಗಳ ಜತೆ ಒಂದಾದ ಇಷಿಕಾವಾ, ಸಿಳ್ಳೆ–ಚಪ್ಪಾಳೆಯೊಂದಿಗೆ ಕುಣಿದಿದ್ದರು. ಈ ಅಸಾಮಾನ್ಯ ಒಲಿಂಪಿಕ್ ಅಭಿಮಾನಿಯ ಜತೆ ನೂರಾರು ಜನ ಫೋಟೊ ತೆಗೆಸಿಕೊಂಡಿದ್ದರು. ಅವರು ಮೊದಲ ಬಾರಿಗೆ ಸಾಕ್ಷಿಯಾದ ಒಲಿಂಪಿಕ್ ಕೂಟವೆಂದರೆ 1992ರಲ್ಲಿ ಬಾರ್ಸಿಲೋನಾದಲ್ಲಿ ನಡೆದ ಕ್ರೀಡಾಹಬ್ಬ. ಉದ್ಘಾಟನಾ ಸಮಾರಂಭದ ಟಿಕೆಟ್ ಖರೀದಿಸಲು ಅವರು ಯಶಸ್ವಿಯಾಗಿದ್ದರು. ಅಲ್ಲಿಂದ ಹಿಂದಿರುಗಿ ನೋಡುವ ಪ್ರಮೇಯವೇ ಅವರಿಗೆ ಒದಗಿರಲಿಲ್ಲ. ಪ್ರತಿಯೊಂದು ಕೂಟದ ಉದ್ಘಾಟನಾ ಸಮಾರಂಭದಿಂದ ಹಿಡಿದು, ತಮ್ಮ ಇಷ್ಟದ ಎಲ್ಲ ಕ್ರೀಡೆಗಳಿಗೆ ಸಾಕ್ಷಿಯಾಗಲು ಅವರು ಅವಕಾಶ ಗಿಟ್ಟಿಸಿದ್ದರು.

ಟೋಕಿಯೊ ಕೂಟದ ಉದ್ಘಾಟನಾ ಸಮಾರಂಭವೇನೋ ತಪ್ಪಿದೆ. ಆದರೆ, ಯಾವುದಾದರೂ ಸ್ಪರ್ಧೆಯನ್ನು ಕ್ರೀಡಾಂಗಣದಲ್ಲೇ ನೋಡುವ ಉಮೇದು ನನಗಿದೆ ಎಂದೆನ್ನುವ ಇಷಿಕಾವಾ, ಕುಸ್ತಿ ಸ್ಪರ್ಧೆಯ ವೀಕ್ಷಕರಾಗುವ ಅವಕಾಶ ಗಿಟ್ಟಿಸಿದ್ದಾರೆ. ಮನೆಯಲ್ಲೇ ಕ್ರೀಡೆಯನ್ನು ಕಣ್ತುಂಬಿಕೊಳ್ಳುವ ಅನುಕೂಲವನ್ನೂ ಅವರು ಪಟ್ಟಿ ಮಾಡುತ್ತಾರೆ. 'ಕ್ರೀಡಾಂಗಣದಲ್ಲಿ ಒಂದು ಸ್ಪರ್ಧಾಕಣದಿಂದ ಮತ್ತೊಂದಕ್ಕೆ ಹೋಗುತ್ತಾ ಆಟದ ಸೊಬಗನ್ನು ನೋಡಬೇಕೆಂದರೆ ದಿನಕ್ಕೆ ಹೆಚ್ಚೆಂದರೆ 3–4 ಸ್ಪರ್ಧೆಗಳನ್ನು ನೋಡಬಹುದು. ಅದೇ ಟಿ.ವಿಯಲ್ಲಿ ನಿತ್ಯ 10ರಿಂದ 15 ಸ್ಪರ್ಧೆಗಳನ್ನು ನೋಡಬಹುದು' ಎಂದು ವಿವರಿಸುತ್ತಾರೆ.

ಹೆಚ್ಚಾಗಿ ಪರಿಚಿತವಲ್ಲದ ಇತರ ಕ್ರೀಡೆಗಳು ಹಾಗೂ ಬೇರೆ ದೇಶಗಳ ಕ್ರೀಡಾಪಟುಗಳ ಕುರಿತು ಅರಿತುಕೊಳ್ಳಲು ಈ ಹೆಚ್ಚುವರಿ ಸ್ಪರ್ಧೆಗಳ ವೀಕ್ಷಣೆಯಿಂದ ಸಾಧ್ಯವಾಗುತ್ತದೆ. ಒಲಿಂಪಿಕ್ ಕೂಟದ ಮೂಲಕ ಜಗತ್ತನ್ನು ನೋಡುವುದು ನನ್ನ ಅಭಿಲಾಷೆ ಎಂದೂ ಅವರು ಹೇಳುತ್ತಾರೆ. ಕ್ರೀಡಾಕೂಟದ ದಿನಗಳಲ್ಲಿ ಒಟ್ಟಾರೆ ಹತ್ತು ಸಾವಿರ ಪ್ರೇಕ್ಷಕರಿಗೆ ಕ್ರೀಡಾಂಗಣದಲ್ಲೇ 'ಆ್ಯಕ್ಷನ್' ಕಣ್ತುಂಬಿಕೊಳ್ಳುವ ಅವಕಾಶ ನೀಡಲು ಸಂಘಟಕರು ನಿರ್ಧರಿಸಿದ್ದಾರೆ. ಆದರೆ, ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು, ಸಂಭ್ರಮಾಚರಣೆಯ ಭಾಗವಾಗಿ 'ಹೈ–ಫೈ' ಕೊಡುವಂತಿಲ್ಲ ಎಂಬ ನಿರ್ಬಂಧ ವಿಧಿಸಲಾಗಿದೆ. ಹೀಗಾಗಿ ಎಷ್ಟು ಸಾಧ್ಯವೋ ಅಷ್ಟು ಸ್ಪರ್ಧೆಗಳನ್ನು ಕ್ರೀಡಾಂಗಣದಲ್ಲೇ ನೋಡಲು ಇಷಿಕಾವಾ ತುದಿಗಾಲ ಮೇಲೆ ನಿಂತಿದ್ದಾರೆ.

30ವರ್ಷಗಳಲ್ಲಿ ಮೊದಲ ಬಾರಿಗೆ ಉದ್ಘಾಟನಾ ಸಮಾರಂಭವನ್ನು ಕ್ರೀಡಾಂಗಣದಲ್ಲಿ ನೋಡಲಾಗದ ವಿಷಾದಭಾವವೂ ಅವರಲ್ಲಿದೆ. 'ಹೌದು, ಕ್ರೀಡಾಂಗಣದಲ್ಲೇ ನಾನು ಆ ಸಂಭ್ರಮವನ್ನು ಕಣ್ತುಂಬಿಕೊಳ್ಳಬೇಕೆಂಬ ಅಭಿಲಾಷೆ ಇತ್ತು. ಆದರೆ, ಸುರಕ್ಷತೆ ಎಲ್ಲಕ್ಕಿಂತ ಮುಖ್ಯ. ಸಾಂಕ್ರಾಮಿಕದ ಈ ಕಾಲಘಟ್ಟದಲ್ಲಿ ಎಲ್ಲರ ಸುರಕ್ಷತೆ ದೃಷ್ಟಿಯಿಂದ ಇದು ಅನಿವಾರ್ಯ ಕೂಡ. ಆದ್ದರಿಂದಲೇ ನಾನು ಕಂಡುಕೊಂಡ ದಾರಿ 'ವರ್ಚ್ಯುವಲ್ ಸ್ಟೇಡಿಯಂ' ಎಂದು ಸಮಾಧಾನದ ನಿಟ್ಟುಸಿರು ಬಿಡುತ್ತಾರೆ.

■ **ಪ್ರವೀಣ ಕುಲಕರ್ಣಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65